

ಫೋಟೋ: ಕೇದಾರನಾಥ

# ಸುರಿವಾ ಮಳೆ ನೀರೆಲ್ಲಾ...

ಮೇಘ ಮಲ್ಹಾರ ವಿಶೇಷ

**ಸಣ್ಣಗೆ ಮಳೆ ಆರಂಭವಾಗುತ್ತಲೇ, ಮನಸು ಬಾಲ್ಯ, ಹರೆಯದಲ್ಲಿ ನೋಡಿದ ಹಳೆಯ ಸಿನಿಮಾಗಳ ಮಳೆಹಾಡುಗಳ ನೆನಪಿನ ಮೆರವಣಿಗೆಯನ್ನೇ ಹೊತ್ತು ತರುತ್ತದೆ.**

■ ಮಂಜುಶ್ರೀ ಎಂ. ಕಡಕೋಳ

ಚಿತ್ರದುರ್ಗ, ದಾವಣಗೆರೆಯಂಥ ಬಯಲುಸೀಮೆಯವರಿಗೆ ಮಳೆ ಅಂದರೆ ಅಷ್ಟಕ್ಕಷ್ಟೆ. ಹಾಗಾಗಿ, ಇಲ್ಲಿ ವರುಣದೇವನಿಗಿಂತ ಸೂರ್ಯದೇವನದ್ದೇ ಕಾರುಬಾರು. ಬಯಲುಸೀಮೆಯವರಿಗೆ ಜಡಿಮಳೆ, ಜೋರುಮಳೆ, ಭಾರೀ ಮಳೆ, ವರ್ಷಧಾರೆ ಅನ್ನುವಂಥ ಪದಗಳು ತುಸು ಕ್ಲೀಷೆಯೇ ಅನ್ನುವಂತೆ. ನಮಗೆಲ್ಲ ಇಂಥ ಮಳೆಯ ವರ್ಣನೆ, ನೋಟಗಳೆಲ್ಲ ಪುಸ್ತಕ ಇಲ್ಲವೇ ಟಿ.ವಿ, ಸಿನಿಮಾಗಳ ಮೂಲಕವೇ ದಕ್ಕಿದ್ದು.

ಈಗ ರಾಜಧಾನಿಯಲ್ಲಿ ಮೋಡಗಳ ಕಣ್ಣಾಮುಚ್ಚಾಲೆ, ಆಗಾಗ ಮುಖ ತೋರಿಸುವ ವರುಣನಿಂದಾಗಿ ಊಟಿಯಂಥ ವಾತಾವರಣ ಮೇಳೈಸುವಾಗ ಮನಸು ಬಾಲ್ಯ, ಹರೆಯದಲ್ಲಿ ನೋಡಿದ ಹಳೆಯ ಸಿನಿಮಾಗಳ ಮಳೆಹಾಡುಗಳ ನೆನಪಿನ ಮೆರವಣಿಗೆಯನ್ನೇ ಹೊತ್ತು ತರುತ್ತದೆ.

ತಣ್ಣಗೆ ಸುರಿವ ಮಳೆಗೂ, ಅಷ್ಟೇ ಸಣ್ಣಗೆ ಮನದೊಳಗೆ ಅಡಗಿರುವ ಕಿಚ್ಚಿನಂತಿರುವ ಪ್ರೇಮಕ್ಕೂ ಎಲ್ಲಿಲ್ಲದ ನಂಟು ಅನ್ನುವ ಅರಿವಾಗಲು ಹೆಚ್ಚು ಸಮಯ ಬೇಕಿಲ್ಲ. ಗಂಧವತಿ ಪೃಥ್ವಿ ಸೂಸುವ ಮಣ್ಣ ವಾಸನೆಯಂತೆ, ಮಳೆ–ಮೋಡಗಳ ಮುಸುಕಿನಾಟದಲ್ಲಿ ಮಳೆಹಾಡಿನ ನೆನಪಿನ ಮಳೆಬಿಲ್ಲೆ ಪ್ರವಾಹದೋಪಾದಿಯಲ್ಲಿ ನುಗ್ಗಿ ಬರುತ್ತದೆಯೆಂದರೆ ಇನ್ನು ಮನದ ಭಾವ ಹೊರಹಾಕಲು ವಿಧಿಯಿಲ್ಲವೆಂಬಂತೆ!

ಅಷ್ಟಕ್ಕೂ ಈ ಮೇಘರಾಜನಿಂದ ಜಗತ್ತಿನಲ್ಲಿ ಯಾವ ಪ್ರೇಮಿಯಾದರೂ, ಕವಿಯಾದರೂ ಬಚಾವಾಗಿದ್ದಾನೆಯೇ?

ಸುಮ್ಮನೆ ಅಂತ ನೆನಪಿಸಿಕೊಂಡರೂ 'ಏಕ್ ಲಡಕೀ ಭೀಗಿ ಭಾಗೀಸಿ' ಹಿಂದಿ ಹಾಡಿನಿಂದ ಶುರು ಮಾಡಿ ಮಧ್ಯೆ ರಿಮ್ ಜಿಮ್ ಗಿರೇ ಸಾವನ್... ಸ್ವಾತಿ ಮುತ್ತಿನ ಮಳೆಹನಿಯೇ, ಒಂದು ಮುಂಜಾವಿನಲಿ ತುಂತುರಿನ ಸೋನೆ ಮಳೆ, ಸೋ ಎಂದು ಶ್ರುತಿ ಹಿಡಿದು ಸುರಿಯುತಿತ್ತು... ಮತ್ತೆ ಮಳೆಯಾಗಿದೆ... ಅನ್ನುವ ಇತ್ತೀಚಿನ ಹಾಡಿನ ತನಕವೂ ಒಂದೇ ಎರಡೇ ಮಳೆಹನಿಗಳಂತೆ ಚಿಟಪಟ ನೆನಪಿನಲ್ಲಿ ಸುರುಳಿಸುರುಳಿಯಾಗಿ ಬರುವ ಮಳೆಹಾಡುಗಳ ಮತ್ತೇರಿಸುವ ಭಾವ. ಅತ್ತ ಸಿನಿಮಾವೂ ಅಲ್ಲದ ಇತ್ತ ಭಾವಗೀತೆಯೂ ಅಲ್ಲದ 'ಅಬ್ ಕೆ ಸಾವನ್' ಆಲ್ಬಂ ಸಾಂಗ್ ಮರೆಯುವುದುಂಟೇ?

ಬೆಳ್ಳಂಬೆಳಗ್ಗೆಯೇ ಧೋ ಎಂದು ಸುರಿವ ಮಳೆ... ಆಫೀಸಿಗೆ ಹೋಗುವ ಹಾದಿಯುದ್ದಕ್ಕೂ ಜೊತೆಗಾರನಂತೆ, ಮಳೆಹನಿಗಳಂತೆ ಒಂದರ ಹಿಂದೆ ಮತ್ತೊಂದು ಕೇಳುವ ಮಳೆಹಾಡುಗಳು ಮನಸನ್ನು ಜಡಿಮಳೆಯಲ್ಲಿ ತೋಯಿಸಿಬಿಡುತ್ತವೆ.

ರಿಮ್ ಜಿಮ್ ಗಿರೇ ಸಾವನ್ ಅಂತ ಲಂಬೂ ಅಮಿತಾಭ್ ಬಚ್ಚನ್ ಜತೆಗೆ ಸೀರೆಯಲ್ಲಿ ತೊಯ್ದು ತೊಪ್ಪೆಯಾದ ಮೌಸಮಿ ಚಟರ್ಜಿ ಮುಂಬೈನ ಮಳೆಯಲ್ಲಿ ಕೈಕೈ ಹಿಡಿದು ಹೆಜ್ಜೆ ಹಾಕ್ತಾ ಇದ್ದರೆ.... ಆ ಮಳೆಯೋ, ಅಮಿತಾಭ್ ಮೌಸಮಿ ಜೋಡಿಯೋ ಅಥವಾ ಲತಾ ಮಂಗೇಶ್ಕರ್ ಅವರ ಮಳೆಯಷ್ಟು ತಂಪಿನ ದನಿಯೋ ಯಾವುದು ನಿಮ್ಮ ಮನಸನ್ನು ಹಿಡಿದಿಟ್ಟು ಮಳೆಯ ನೆನಪಿನ ಚುಂಗಿಗೆ ಕರೆದೊಯ್ಯುತ್ತಿರುವುದು ಎನ್ನುವಷ್ಟು ಗಲಿಬಿಲಿಯಾಗುವಷ್ಟು ಆ ಹಾಡಿನ ಮೋಡಿ...

ಆಮೇಲೆ 1942ರ ಏಕ್ ಲವ್ ಸ್ಟೋರಿಯ 'ರಿಮ್ ಜಿಮ್ ರಿಮ್ ಜಿಮ್, ರುಮ್ ಜುಮ್ ಜುಮ್' ಅಂತ ಅನಿಲ್ ಕಪೂರ್, ಮುದ್ದು ಮುಖದ